ಶ್ರೀ ಬಿ.ಶಿವರಾಮು : ಆಯಿತು ಎನ್ನುವುದಾದರೆ ಒಪ್ಪಿಕೊಂಡು ಬಿಡುತ್ತೇನೆ.

246 (1632) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರಕ್ಕೆ ಕಾವೇರಿ ನೀರು ಸರಬರಾಜು ಎಂದಿನಿಂದ ಪ್ರಾರಂಭಿಸಲಾಗಿದೆ;

ಆ) ಈಗ ಬೆಂಗಳೂರು ನಗರಕ್ಕೆ ಕಾವೇರಿ ನೀರನ್ನು ಎಷ್ಟನೇ ಹಂತಕ್ಕೆ ತಲುಪಿಸಲಾಗಿದೆ;

ಇ) ಬೆಂಗಳೂರು ನಗರವು ಬೃಹದಾಕಾರವಾಗಿ ಬೆಳೆಯುತ್ತಿದ್ದು, ಇಡೀ ಬೆಂಗಳೂರು ನಗರಕ್ಕೆ ಕಾವೇರಿ ನೀರಿನ ವ್ಯವಸ್ಥೆಯನ್ನು ಒದಗಿಸಲು ಏನು ಕ್ರಮ ಕೈಗೊಳ್ಳಲಾಗಿದೆ;

ಈ) ಬೆಂಗಳೂರು ನಗರಕ್ಕೆ ಕಾವೇರಿ ನೀರನ್ನು ಬಿಟ್ಟು ಬೇರೆ ನೀರಿನ ಪರ್ಯಾಯ ವ್ಯವಸ್ಥೆ ಮಾಡಲಾಗುವುದೇ?

ಶ್ರೀ ಹೆಚ್.ಡಿ.ಕುಮಾರಸ್ವಾಮಿ (ಮುಖ್ಯಮಂತ್ರಿ) :

ಅ) ಬೆಂಗಳೂರು ನಗರಕ್ಕೆ ಕಾವೇರಿ ನೀರು ಸರಬರಾಜು ದಿನಾಂಕ: 24–01–1974 ರಿಂದ ಕಾವೇರಿ ನೀರು ಸರಬರಾಜು ಯೋಜನೆ ಮೊದಲನೇ ಹಂತ ಕಾರ್ಯಗತಗೊಳಿಸುವುದರ ಮೂಲಕ ಪ್ರಾರಂಭಿಸಲಾಗಿದೆ.

ಆ) ಈಗ ಬೆಂಗಳೂರು ನಗರಕ್ಕೆ ಕಾವೇರಿ ನೀರು ಸರಬರಾಜು ಯೋಜನೆ ಮೊದಲನೇ, ಎರಡನೇ, ಮೂರನೇ ಮತ್ತು ನಾಲ್ಕನೇ ಹಂತದ ಮೊದಲನೇ ಘಟ್ಟಗಳಿಂದ ಕಾವೇರಿ ನೀರನ್ನು ಸರಬರಾಜು ಮಾಡಲಾಗುತ್ತಿದೆ.

ಇ) ಬೆಂಗಳೂರು ನಗರವು ಬೃಹದಾಕಾರವಾಗಿ ಬೆಳೆಯುತ್ತಿದ್ದು ಬೆಂಗಳೂರು ಮಹಾನಗರ ಪ್ರದೇಶಗಳಿಗೆ ಕಾವೇರಿ ಮೊದಲನೇ, ಎರಡನೇ, ಮೂರನೇ ಮತ್ತು ನಾಲ್ಕನೇ ಹಂತದ ಮೊದಲನೇ ಘಟ್ಟಗಳಿಂದ ನೀರು ಪೂರೈಸಲಾಗುತ್ತಿದೆ.

ಬೆಂಗಳೂರು ಜಲಮಂಡಳಿಯು ಈಗಾಗಲೇ ಅನುಷ್ಠಾನಗೊಳಿಸಿರುವ ಕಾವೇರಿ ನೀರು ಸರಬರಾಜು ಯೋಜನೆ ನಾಲ್ಕನೇ ಹಂತ ಮೊದಲನೇ ಘಟ್ಟದಿಂದ ಹೆಚ್ಚುವರಿ 100 ದಶಲಕ್ಷ ಲೀಟರ್ ದಿನಂ ಪ್ರತಿ ಕುಡಿಯುವ

ನೀರನ್ನು ವೃದ್ಧಿಸುವ ಯೋಜನೆಯು ಪ್ರಗತಿಯಲ್ಲಿದ್ದು, ಸೆಪ್ಟೆಂಬರ್ 2007ರ ಅಂತ್ಯದ ವೇಳೆಗೆ ಪೂರ್ಣಗೊಳಿಸಲು ಯೋಜಿಸಲಾಗಿದೆ.

ಈಗಾಗಲೇ ಕೈಗೆತ್ತಿಕೊಂಡಿರುವ ಕಾವೇರಿ ನೀರು ಸರಬರಾಜು ಯೋಜನೆ ನಾಲ್ಕನೇ ಹಂತ, ಎರಡನೇ ಘಟ್ಟದಿಂದ ಪ್ರತಿದಿನ ಹೆಚ್ಚುವರಿ 500 ದಶಲಕ್ಷ (7 ಟಿಎಂಸಿ) ಕುಡಿಯುವ ನೀರು 2011--12ರ ವೇಳೆಗೆ ಬೆಂಗಳೂರು ಮಹಾನಗರಕ್ಕೆ ಪೂರೈಕೆಯಾಗಲಿದೆ.

ಈ) ಈಗಾಗಲೇ ಅರ್ಕಾವತಿ ನದಿ ನೀರನ್ನು ತಿಪ್ಪಗೊಂಡನಹಳ್ಳಿ ಜಲಾಶಯದಿಂದ ಪಂಪ್ ಮಾಡಿ ಬೆಂಗಳೂರು ನಗರಕ್ಕೆ ಸರಬರಾಜು ಮಾಡಲಾಗುತ್ತಿದೆ. ತಿಪ್ಪಗೊಂಡನಹಳ್ಳಿ ಜಲಾಶಯ ಭರ್ತಿ ಇದ್ದಾಗ (74) ಸರಾಸರಿ 135 ದಶಲಕ್ಷ ಲೀಟರ್ ನೀರನ್ನು ಪ್ರತಿದಿನ ಸರಬರಾಜು ಮಾಡಲಾಗುತ್ತದೆ. ಪ್ರಸ್ತುತ ಜಲಾಶಯದ ನೀರಿನ ಮಟ್ಟ 13.6 ಇರುವುದರಿಂದ, ಸರಾಸರಿ 38 ದಶಲಕ್ಷ ಲೀಟರ್ ನೀರನ್ನು ಮಾತ್ರ ಪ್ರತಿದಿನ ಪಂಪ್ ಮಾಡಲಾಗುತ್ತಿದೆ.

ಹೊಸ ನೀರು ಸರಬರಾಜು ಮೂಲಗಳನ್ನು ಕಂಡುಕೊಳ್ಳಲು ನುರಿತ ತಜ್ಞರ ಸಮಿತಿಯೊಂದನ್ನು ರಚಿಸಲಾಗಿದೆ. ಈ ಸಮಿತಿಯು ಹೊಸ ನೀರು ಸರಬರಾಜು ಮೂಲಗಳ ರೂಪುರೇಷೆಗಳನ್ನು ವಿಮರ್ಷಿಸುತ್ತಿದೆ. ಸಮಿತಿಯ ವರದಿಯು ಬಂದ ನಂತರ ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಇದು ಬಹಳ ಪ್ರಮುಖವಾದ ಪ್ರಶ್ನೆಯಾಗಿದೆ. ಬೆಂಗಳೂರು ನಗರ ಸಿಕ್ಕಾಪಟ್ಟೆ ಬೆಳೆಯುತ್ತಿದೆ. ಅದು ಯಾವ ರೀತಿ ಎಷ್ಟು ಬೆಳೆಯುತ್ತದೆಂದು ಯಾರೂ ನಿಗದಿಪಡಿಸುವು ದಕ್ಕಾಗುತ್ತಿಲ್ಲ. ಆ ರೀತಿ ವೇಗವಾಗಿ ಬೆಳೆಯುತ್ತಿದೆ. ಎಲ್ಲಾ ದಿಕ್ಕಿನಲ್ಲೂ ವೇಗವಾಗಿ ಬೆಳೆಯುತ್ತಿದೆ. ಇದಲ್ಲದೆ ಬೃಹತ್ ಬೆಂಗಳೂರು ಅನ್ನು ಮಾಡುವ ವ್ಯವಸ್ಥೆ ನಡೆಯುತ್ತಿದೆ. ಬಹುಶಃ ಸುತ್ತಮುತ್ತ ಇರುವ ಹತ್ತಿರವಿರುವ ತಾಲ್ಲೂಕುಗಳೆಲ್ಲ ಬೆಂಗಳೂರಿಗೆ ಸೇರುತ್ತಿದೆ. ಮುಂದಿನ ದಿನಗಳಲ್ಲಿ ಒಂದೂವರೆ ಕೋಟಿಗಿಂತಲೂ ಮೇಲ್ಪಟ್ಟು ಜನಸಂಖ್ಯೆಗೆ ತಲುಪತಕ್ಕಂಥ ಪರಿಸ್ಥಿತಿ ಇದೆ. 4ನೇ ಹಂತ ಆದರೂ ಕೂಡ ಕುಡಿಯುವ ನೀರು ಕೊಡುವುದಕ್ಕೆ ಸಾಕಾಗುತ್ತದೆಯೇ ಅಥವಾ ಇಲ್ಲವೇ? ಅತ್ಯಂತ ಗಂಭೀರವಾದ ಪರಿಸ್ಥಿತಿ ಇದ್ದು ಇದರ ಬಗ್ಗೆ ಮುಂದಿನ ಚಿಂತನೆ ಏನು ಎಂದು ಸರ್ಕಾರ ತಿಳಿಸಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ಪಿ.ಪ್ರಕಾಶ್ (ಗೃಹ, ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಮಾನವ ಹಕ್ಕುಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ವಾಟಾಳ್ ನಾಗರಾಜ್‌ರವರು ಅಭಿಪ್ರಾಯ ವ್ಯಕ್ತ ಮಾಡಿದಂತೆ ಇದೊಂದು ಭಾರೀ ಆತಂಕಕಾರಿ ಆದಂಥ ಬೆಳವಣಿಗೆಯಾಗಿದೆ. ಪ್ರಾಯಶಃ ಏಷ್ಯಾ ಖಂಡದಲ್ಲಿಯೇ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ನಗರವೆಂದರೆ ಬೆಂಗಳೂರು ನಗರವಾಗಿದೆ. ಅವರು ಊಹೆ ಮಾಡಿದಂತೆ ಅದು ಒಂದೂವರೆ ಕೋಟಿ ಜನಸಂಖ್ಯೆಯನ್ನು ಮುಂದಿನ ದಿನಮಾನಗಳಲ್ಲಿ ತಲುಪಬಹುದು. ಈಗಾಗಲೇ ನಿಮಗೆ ಗೊತ್ತಿದ್ದಂತೆ ಬೆಂಗಳೂರು ನಗರ ಸಮುದ್ರ ಮಟ್ಟದಿಂದ 3400 ಅಡಿಗಳಿಗಿಂತಲೂ ಹೆಚ್ಚು ಎತ್ತರದಲ್ಲಿರುವ ಪ್ರದೇಶವಾಗಿ ಪಕ್ಕದಲ್ಲಿ ಯಾವ ನದಿಗಳೂ ಕೂಡ ಇರಲಿಲ್ಲ. ಆದರೂ ಕೂಡ ಅದನ್ನು ಕಾವೇರಿ ನದಿಯಿಂದ pump ಮಾಡುವುದರ ಮೂಲಕವಾಗಿ ಇಲ್ಲಿ ನೀರನ್ನು ಒದಗಿಸಬೇಕೆನ್ನುವ ಪರಿಕಲ್ಪನೆಯನ್ನು ಪ್ರಥಮ ಬಾರಿಗೆ ತರುವಂಥವರು ದಿವಂಗತ ಎಸ್.ನಿಜಲಿಂಗಪ್ಪನವರು. ಆಗ ಈ ಕಾರ್ಯದ ಬಗ್ಗೆ ಬಹಳ ಜನ ಅಪಹಾಸ್ಯವನ್ನೂ ಕೂಡ ಮಾಡಿದ್ದರು. ಕಾರ್ಯಸಾಧುವಲ್ಲದಂಥದ್ದು, ಕುಡಿಯುವ ನೀರು ಒದಗಿಸಲು ವಿದ್ಯುಚ್ಛಕ್ತಿಯನ್ನು ಎಲ್ಲಿಂದ ಒದಗಿಸುತ್ತಾರೆ, ಎಲ್ಲಿಗೆ pump ಅಳವಡಿಸಿ ನೀರನ್ನು ಒದಗಿಸುತ್ತಾರೆನ್ನುವ ಮಾತುಗಳೂ ಆ ಕಾಲದಲ್ಲಿ ಪ್ರಸ್ತಾಪವಾಗಿತ್ತು. ಇದೆಲ್ಲ ತಮಗೆ ಗೊತ್ತಿರುವ ವಿಚಾರವಾಗಿದೆ. ಅದಾದನಂತರ 24-01-1974ರಂದು ಕಾವೇರಿ ಮೊದಲನೇ ಹಂತದ ಯೋಜನೆಗಳನ್ನು ಪೂರ್ಣಗೊಳಿಸಿ ನೀರು ಕೊಡಲಿಕ್ಕೆ 135 ದಶಲಕ್ಷ ಲೀಟರ್ ನೀರನ್ನು ಒದಗಿಸುವ ಪ್ರಯತ್ನವಾಗಿ ಈಗ 4ನೇ ಹಂತಕ್ಕೆ ನಾವು ಬಂದಿದ್ದೇವೆ. ಈ 4ನೇ ಹಂತದಲ್ಲಿ ಸುಮಾರು 2830.70 ಕೋಟಿ ರೂಪಾಯಿಗಳ ಯೋಜನೆ ಇದಾಗಿದೆ. 2830.70 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಇದನ್ನು ನಿರ್ಮಾಣ ಮಾಡಿ 2011-12ರ ವೇಳೆಗೆ 500 ದಶಲಕ್ಷ ಲೀಟರ್ ಹೆಚ್ಚುವರಿ ನೀರನ್ನು ಇಲ್ಲಿಗೆ ಒದಗಿಸಬೇಕೆನ್ನುವ ಮಹತ್ವಾಕಾಂಕ್ಷಿಯಾದಂಥ ಈ ಕಾರ್ಯವನ್ನು ಈಗಾಗಲೇ ಪ್ರಾರಂಭ ಮಾಡಿದ್ದೇವೆ. ಈಗ ತಾವು ಹೇಳಿದಂತೆ ನಮಗೆ ತಿಪ್ಪಗೊಂಡನಹಳ್ಳಿ ಕೆರೆಯ ಜಲಾಶಯದಿಂದ ಒಂದನೇ ಮೂರು ಭಾಗದಷ್ಟು ಬೆಂಗಳೂರಿನ ಭಾಗಕ್ಕೆ ನೀರು ಲಭ್ಯವಾಗುತ್ತಿತ್ತು. ಆದರೆ, ಅಲ್ಲಿ ಈಗ 135 ದಶಲಕ್ಷ ಲೀಟರ್‌ಗಳನ್ನು ನಾವು ಒದಗಿಸುತ್ತಿದ್ದೇವೆ. ಆದರೆ, ತಿಪ್ಪಗೊಂಡನಹಳ್ಳಿ ಜಲಾಶಯದ ನೀರಿನ ಮಟ್ಟ ಬಹಳ ಕಡಿಮೆಯಾಗಿದೆ. ಆ

ಕಾರಣಕ್ಕಾಗಿ ಈಗ ಕೇವಲ 38 ದಶಲಕ್ಷ ಲೀಟರ್ ನೀರನ್ನು ಮಾತ್ರ ಅಲ್ಲಿಂದ ಒದಗಿಸುತ್ತಿದ್ದೇವೆ. ಅದಕ್ಕೆ ಜಲಮೂಲಗಳು ಏನೇನಿವೆ? ಮುಚ್ಚಿಹೋಗಿರುವಂಥ ಜಲ ಮೂಲಗಳು ಮತ್ತು ಬೇರೆ ಮೂಲಗಳಿದ್ದರೆ ಅವುಗಳ ಬಗ್ಗೆ ಪುನರ್‌ಜ್ಜೀವನಗೊಳಿಸುವ ವಿಚಾರಕ್ಕಾಗಿಯೇ ಒಂದು ತಜ್ಞರ ಸಮಿತಿಯ ನೇಮಕ ಮಾಡಲಾಗಿದೆ. ಅವರ ವರದಿ ಬಂದ ನಂತರ ಈ ನೀರನ್ನು ಜಲಾಶಯಕ್ಕೆ ತಂದಾಗ ಬಹುತೇಕವಾಗಿ ಕಾವೇರಿ ನೀರಿನ ಒತ್ತಡಕ್ಕೆ ಒಳಗಾಗತಕ್ಕಂಥ ಈ ಪ್ರದೇಶದಲ್ಲಿ ಈ ಅನುಕೂಲಗಳು ಕೂಡ ಆಗುವಂಥ ಸಂಭವವಿದೆ. ಇದರ ಜೊತೆಗೆ ಈಗಾಗಲೇ ಕೊಳಚೆ ನೀರು ಶುದ್ಧೀಕರಣದ ಘಟಕದಿಂದ ತೃತೀಯ ಹಂತದಲ್ಲಿ ಒಂದು ದಶಲಕ್ಷ ಲೀಟರ್ ನೀರನ್ನು ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ನಾವು ಕೊಡುತ್ತಿದ್ದೇವೆ. ಹಾಗೆಯೇ BEL ಕಾರ್ಖಾನೆಗಳಿಗೆ ಒಂದು ದಶಲಕ್ಷ ಲೀಟರ್ ನೀರನ್ನು ಕೊಡುತ್ತಿದ್ದೇವೆ. Valley ಕೊಳಚೆ ನೀರು ಶುದ್ಧೀಕರಣ ಘಟಕದಿಂದ ಶುದ್ಧೀಕರಿಸಿದ ಒಂದು ದಶಲಕ್ಷ ಲೀಟರ್ ನೀರನ್ನು ಖಾಸಗಿ ಕಾರ್ಖಾನೆಗಳಿಗೆ ನಾವು ಈಗ ಒದಗಿಸುತ್ತಿದ್ದೇವೆ. ಇಲ್ಲಿಯ ನಿವಾಸಿಗಳಿಗೆ ತೊಂದರೆಯಾದಂಥ ಎಲ್ಲಾ ಪ್ರಯತ್ನವನ್ನು ಕೂಡ ಮಾಡುತ್ತಿದ್ದೇವೆ. ತಮಗೆ ಈಗಾಗಲೇ ಗೊತ್ತಿದ್ದಂತೆ ಕಾವೇರಿ ನ್ಯಾಯಾಧೀಕರಣದ ತೀರ್ಪು ಕೂಡ ನಮ್ಮ ಬೆಂಗಳೂರು ನಗರದ ಮೇಲೆ ಆಘಾತಕಾರಿಯಾಗಿರತಕ್ಕಂಥದ್ದು ಇದೆ. ಬೇರೆ ಬೇರೆ ಕಣಿವೆಗಳ ಲೆಕ್ಕಾಚಾರದಲ್ಲಿ ನಮ್ಮ ಬೆಂಗಳೂರಿಗೆ ಕಾವೇರಿ ಕಣಿವೆಯಲ್ಲಿ ಬರತಕ್ಕಂಥದ್ದು ಕೇವಲ ಸ್ವಲ್ಪ ಭಾಗ. ಉಳಿದಿರತಕ್ಕಂಥದ್ದೆಲ್ಲ ಕೃಷ್ಣ ಕಣಿವೆಯಲ್ಲಿ ಬರುತ್ತದೆ. ಆದ್ದರಿಂದ, ಈ ಕಣಿವೆಯನ್ನು ಅಂತರ ಕಣಿವೆಯ ಮೂಲಕವಾಗಿ ನೀರನ್ನು ಉಪಯೋಗಿಸಲಿಕ್ಕೆ ಬರುವುದಿಲ್ಲವೆನ್ನುವ ಐತೀರ್ಪು ಬೆಂಗಳೂರು ನಗರದ ಮಟ್ಟಿಗೆ ಆಘಾತಕಾರಿಯಾದದ್ದು. ಅದರ ಬಗ್ಗೆಯೂ ಕೂಡ ನಾವು ಸೂಕ್ತವಾದ ಕಾನೂನಿನ ಸಮರವನ್ನು ಅಲ್ಲಿ ಮಾಡಿದ್ದೇವೆ. ನೀವು ಹೇಳಿದಂತೆ ನಿತ್ಯ ಮಾನವನಿಗೆ ಸಾಧವಾದಷ್ಟು ರೀತಿಯ ಪ್ರಯತ್ನವೆಲ್ಲವನ್ನು ಮಾಡುವುದರ ಮೂಲಕ ಬೆಂಗಳೂರಿನ ನೀರಿನ ಸಮಸ್ಯೆಯನ್ನು ಬಗೆಹರಿಸುವಂಥ ಕೆಲಸವನ್ನು ಮಾಡುತ್ತಿದ್ದೇವೆ.

ಶ್ರೀ ಎನ್.ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೇ, ಶ್ರೀ ವಾಟಾಳ್ ನಾಗರಾಜ್‌ರವರು ಮೊಟ್ಟ ಮೊದಲನೆಯದಾಗಿ ಚಿಕ್ಕಪೇಟೆ ಕ್ಷೇತ್ರದಿಂದ ಆರಿಸಿ ಬಂದವರು. ಈಗ ಚಾಮರಾಜ ನಗರಕ್ಕೆ

ಹೋಗಿದ್ದಾರೆ. ಹೀಗೆ ಎರಡೂ ಕ್ಷೇತ್ರದ ಶಾಸಕರಾಗಿದ್ದಾರೆ. ವಿಶೇಷವಾಗಿ ಬೆಂಗಳೂರು ನಗರದ ಬಗ್ಗೆ ಹೆಚ್ಚಿನ ಕಾಳಜಿ ಅವರಿಗಿದೆ, ಇವತ್ತು ಮಾನ್ಯ ಪ್ರಕಾಶ್‌ರವರನ್ನು ಕೇಳಿಕೊಳ್ಳುವುದೇನೆಂದರೆ, Bangalore is the fastest growing city in the country. 74% ಜನಸಂಖ್ಯೆ ಇಲ್ಲಿ ಬೆಳೆಯುತ್ತಿದೆ. 1940 ರಲ್ಲಿ Bangalore population was only 3 lakhs. ಬೆಂಗಳೂರಿಗೆ IT, BT ಬಂದಿದ್ದರಿಂದ ಈಗ ಒಂದು ಕೋಟಿ ಜನಸಂಖ್ಯೆವರೆಗೆ ತಲುಪಿದೆ. ಮೊನ್ನೆ ಕೂಡ ಒಂದು ವಿಚಾರ ಸಂಕೀರ್ಣಕ್ಕೆ ಜಯಪಾಲ್‌ರೆಡ್ಡಿಯವರು ಬಂದಾಗ, ಶ್ರೀಮಾನ್ ರಾಮಲಿಂಗಾರೆಡ್ಡಿಯವರು, ಇತರೆ ಎಲ್ಲ ಬೆಂಗಳೂರು ಶಾಸಕರು ಕೂಡ ಏನು ಹೇಳುತ್ತಿದ್ದರೆಂದರೆ, We must have a Metropolitan Authority in Bangalore. ಏಕೆಂದರೆ, there must be a perfect Co-ordination. Housing Board ಇದೆ, Slum Board ಇದೆ, BDA ಇದೆ, ಇವೆಲ್ಲವನ್ನೂ ಒಳಗೊಂಡಂತೆ ಒಂದು Metropolitan Authority ಇದೆ, kolkata ದಲ್ಲಿದೆ, Delhi ಯಲ್ಲಿದೆ, Bombay ಯಲ್ಲಿದೆ, ಆಂಧ್ರದಲ್ಲಿ ಕೂಡ ಇದೆ. Metropolitan Authority ಆದರೆ, there will be perfect co-ordination. ಈಗ ಬಿಡಿಎದವರು ನಾವು ಇಷ್ಟು ಸೈಟ್ ಮಾಡುತ್ತೇವೆನ್ನುತ್ತಾರೆ. ಬಿಡಿಎದವರು ಇಷ್ಟು ಸೈಟ್ ಮಾಡಿದರೆ, ಕೊಡುವ ಶಕ್ತಿ ತಮಗಿದೆಯೇ? Electricity supply ಮಾಡುವ ಶಕ್ತಿ ಇದೆ. ಎಲ್ಲಿಯವರೆಗೆ Metropolitan Authority ಮಾಡುವುದಿಲ್ಲವೋ ಅಲ್ಲಿಯ ವರೆಗೆ ಆಗುವುದಿಲ್ಲ. ವ್ಯವಸ್ಥಿತವಾಗಿ ಇಷ್ಟು ಬೆಳೆಯುವ ಬೆಂಗಳೂರು ನಗರವನ್ನು ನಾವು ಹತೋಟಿಯಲ್ಲಿಡಬೇಕಾಗುತ್ತದೆ. ಇವತ್ತು ದೈನಂದಿನ ಜೀವನಕ್ಕೆ ಸಂಬಂಧಪಟ್ಟಂಥ ಸೌಕರ್ಯಗಳನ್ನು ಕಲ್ಪಿಸಿಕೊಡುವ ರೀತಿಯಲ್ಲಿ ಕೂಡ ಆಗುತ್ತದೆ. Metropolitan Authority is advisory in nature. ಅದರಿಂದ ಉಪಯೋಗವಾಗುವುದಿಲ್ಲ. You have to give statutory powers. Metropolitan Authority ಮಾಡಿದರೆ ಸರಿಯಾದ ರೀತಿಯಲ್ಲಿ ಎಲ್ಲಾ ಸಮಸ್ಯೆಗಳೂ ಬಗೆಹರಿಯುತ್ತವೆ. ಇವತ್ತು ಕಾವೇರಿ ವಿಷಯದಲ್ಲಿ, ನೀವು ಎಷ್ಟು Cusecs water ತರುತ್ತಿದ್ದೀರಿ? Cauvery ಬೆಂಗಳೂರು ನಗರಕ್ಕೆ ಮಾತ್ರ ನೀರು ಕೊಡಲಿಕ್ಕೆ ಅಲ್ಲ, irrigation ಕೂಡ ಇದೆ. ಮಂಡ್ಯ, ಹಾಗೂ

ಬೇರೆ ಕಡೆ ಕೂಡ ಕೇಳುತ್ತಾರೆ. ಇವತ್ತು drinking waterಗೆ ಎಷ್ಟು cusecs ನೀರು ನಾವು draw ಮಾಡಬೇಕಾಗಿದೆ, ಅಲ್ಲಿಯವರೆಗೆ We must have an agreement with the irrigation. ಅದಕ್ಕೆ ಇವೆಲ್ಲವನ್ನೂ ನೋಡಿ. ಇದು ಬಹಳ ಗಂಭೀರವಾದ ಪ್ರಶ್ನೆ ಇದೆ. leakage ಅನ್ನು ನೀವು detect ಮಾಡುವುದಕ್ಕೆ ಹೋಗುತ್ತಿಲ್ಲ. More than 46% ಎಂದು ನಿಮ್ಮ Statement ನಲ್ಲಿ ಬಂದಿದೆ. ಸನ್ಮಾನ್ಯ ಪ್ರಕಾಶ್‌ರವರೇ, according to leakage of water underground which is not visible to the naked eyes is more than 50% in Banglore city. ಅದನ್ನು ಸರಿಪಡಿಸಿ. ಆಗ ಆಗುತ್ತದೆ. ಲೋನ್ ಬಗ್ಗೆ ಏನಾಗಿದೆ ಎಂಬ ಬಗ್ಗೆ White paper publish ಮಾಡಿ.

ಅಧ್ಯಕ್ಷರು : ರಾಮಲಿಂಗಾರೆಡ್ಡಿಯವರೆ, ಬೆಂಗಳೂರಿನ ಎಲ್ಲ ಸದಸ್ಯರೂ ಅವಕಾಶ ಕೇಳುತ್ತಿದ್ದೀರಿ. ಈಗ question hour ನಡೆಯುತ್ತಿದೆ. ಇದು 6ನೇ ಪ್ರಶ್ನೆ. ಈಗ 11.25 ಆಗಿದೆ. ಪ್ರಶ್ನೋತ್ತರ 10.45ಕ್ಕೆ Start ಆಯಿತು. ಆದ್ದರಿಂದ, ಬೇಕಾದರೆ, ಈ ವಿಷಯವನ್ನು ಅರ್ಧ ಗಂಟೆ ಕಾಲಾವಧಿ ಚರ್ಚೆಗೆ ತೆಗೆದುಕೊಳ್ಳುವುದಕ್ಕೆ ಅವಕಾಶ ಕೊಡುತ್ತೇನೆ. ಏಕೆಂದರೆ, ನೀವೆಲ್ಲ ಅವಕಾಶ ಕೇಳಿದ್ದೀರಿ ಈಗ ಆದರೆ ಇದು ಮುಗಿಯುವುದಿಲ್ಲ. ಇನ್ನೂ 10 ಪ್ರಶ್ನೆಗಳಿವೆ.

ಶ್ರೀ ನೆ.ಲ.ನರೇಂದ್ರಬಾಬು : ಅರ್ಧ ಗಂಟೆ ಚರ್ಚೆಗೆ ಇದನ್ನು ಇಟ್ಟರೆ ಬಹಳ ಒಳ್ಳೆಯದು.

ಅಧ್ಯಕ್ಷರು : ಅರ್ಧ ಗಂಟೆ ಚರ್ಚೆಗೆ ಅವಕಾಶ ಕೊಡುತ್ತೇನೆ. ಏಕೆಂದರೆ, ಎಲ್ಲರಿಗೂ ಅವಕಾಶ ಸಿಕ್ಕಬೇಕಲ್ಲ?

ಶ್ರೀ ವಾಟಾಳ್ ನಾಗರಾಜ್ : ನಾನು ಹೇಳಿದ್ದಕ್ಕೆ ತಾವು ಉತ್ತರ ಕೊಡುವಾಗ ನಿಜಲಿಂಗಪ್ಪನವರು. . . .

ಅಧ್ಯಕ್ಷರು : ವಾಟಾಳ್ ನಾಗರಾಜ್‌ರವರೆ, ಈ ವಿಷಯವನ್ನು ಅರ್ಧ ಗಂಟೆ ಚರ್ಚೆಗೆ ಅವಕಾಶ ಕೊಡುತ್ತೇನಲ್ಲ. ಏಕೆಂದರೆ, ಬೆಂಗಳೂರು ನಗರದ ಎಲ್ಲ. . . .

ಶ್ರೀ ವಾಟಾಳ್ ನಾಗರಾಜ್ : ಅರ್ಧ ಗಂಟೆ ಚರ್ಚೆಗೆ ತೆಗೆದುಕೊಳ್ಳ ಬೇಕಾದ ವಿಷಯಗಳು ಬಹಳ ಇವೆಯಲ್ಲ ಸಾರ್.

ಶ್ರೀ ಜೆ.ಸಿ.ಮಾಧುಸ್ವಾಮಿ : ಈ ಸಭೆ ಒಂದು ವರ್ಷ ನಡೆಯುತ್ತದೆಯೇ? 2 ವರ್ಷ ನಡೆಯುತ್ತದೆಯೇ? ಎಷ್ಟು ವಿಷಯಗಳನ್ನು ಅರ್ಧ ಗಂಟೆ ಚರ್ಚೆಗೆ ತೆಗೆದುಕೊಳ್ಳುತ್ತೀರಿ?

ಅಧ್ಯಕ್ಷರು : 2–3 ಇವೆ, ಅವಕಾಶ ಕೊಡುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಈಗ ಅರ್ಧ ಗಂಟೆ ಚರ್ಚೆಗೆ ಕೊಡುತ್ತೇವೆಂದು ತಾವು ಹೇಳಿರುವುದು, ನಾವು ಕೊಟ್ಟಿರುವ ನೋಟೀಸ್‌ಗಳು pending ಇವೆ, ಈ ಸದನ ಎಷ್ಟು ವರ್ಷ ನಡೆಯುತ್ತದೆಂದು ಹೇಳಿ.

ಅಧ್ಯಕ್ಷರು : ಎಲ್ಲರೂ ಅವಕಾಶ ಕೇಳುತ್ತಿದ್ದಾರೆ. ಈಗ ಪ್ರಶ್ನೋತ್ತರ ದಲ್ಲಿ ಹೇಗೆ ಮುಗಿಸುವುದು? ಇದು ನನ್ನ ಪ್ರಶ್ನೆ.

ಶ್ರೀ ಜೆ.ಸಿ.ಮಾಧುಸ್ವಾಮಿ : ನೀವು ಸಭೆ ನಡೆಸಿ, ಚರ್ಚೆ ಮಾಡುವುದಕ್ಕೆ ಅವಕಾಶ ಕೊಡುವುದಾದರೆ ನಮ್ಮ ತಕರಾರಿಲ್ಲ. ಆದರೆ, ಈವರೆಗೆ ತಮ್ಮ ಸಂಪ್ರದಾಯ ಯಾವುದೂ ಅಂಥ ಚರ್ಚೆ ಇಲ್ಲಿ ಆಗಿಲ್ಲ.

ಅಧ್ಯಕ್ಷರು : ಅವಕಾಶ ಮಾಡೋಣ.

ಶ್ರೀ ಜೆ.ಸಿ.ಮಾಧುಸ್ವಾಮಿ : Adjourn ಆಗುತ್ತಾ ಬರುತ್ತಿದೆ. ಸುಮ್ಮನೆ, ನಾವು ಕೇಳಿದಾಗಲೂ ಹೇಳುವುದಕ್ಕೆ ಬಿಡುವುದಿಲ್ಲ.

ಅಧ್ಯಕ್ಷರು : ಒಂದು ಗಂಟೆ extra ಕುಳಿತುಕೊಳ್ಳುವುದು ಇದೆಲ್ಲ. ಅರ್ಧ ಗಂಟೆಗೆ ಸೀಮಿತವಾಗಿ ಮುಗಿಸುವುದಾದರೆ, ಮಾಡಬಹುದು.

ಶ್ರೀ ಜೆ.ಸಿ.ಮಾಧುಸ್ವಾಮಿ : ಚರ್ಚೆಗೆ ಅವಕಾಶ ಕೊಡಿ.

ಅಧ್ಯಕ್ಷರು : ಮಾಡೋಣ ಬಿಡಿ. ಅರ್ಧ ಗಂಟೆಗೆ ಚರ್ಚೆಗೆ ಅವಕಾಶ ಕೊಡೋಣ.

ಶ್ರೀ ಪಾಟಾಳ್ ನಾಗರಾಜ್ : ಒಪ್ಪುತ್ತೇನೆ. ಅರ್ಧ ಗಂಟೆ ಚರ್ಚೆಗೆ ತೆಗೆದುಕೊಳ್ಳಬೇಕಾದವು ತಮ್ಮ ಹತ್ತಿರ ಸುಮಾರು 20 ಇವೆ.

ಅಧ್ಯಕ್ಷರು : 20 ಇಲ್ಲ, 2,3,4 ಅಷ್ಟೇ. ನಮ್ಮ ಮುಂದೆ ಇರುವುದು ಅಷ್ಟೇ ಸ್ವಾಮಿ. Next time ಕೊಡೋಣ.

ಬಾಂಬೆಯಲ್ಲಿ ಎಷ್ಟು ಜನಸಂಖ್ಯೆ ಬೆಳೆದರೂ there is gravity. ಅಲ್ಲಿ ನೀರು ಹರಿದು ಬರುತ್ತದೆ. ಪ್ರಕಾಶ್‌ರವರೆ, ಇಲ್ಲೇನಾಗುತ್ತದೆಂದರೆ, ಬೆಂಗಳೂರು ನಗರ ವಿಶ್ವದಲ್ಲಿ 6ನೇ ಪಟ್ಟಣ, lower level ನಿಂದ higher level ಗೆ 1500 feet you have to pump the water. ಅದಕ್ಕೆ ಬಹಳ ಸಮಸ್ಯೆ ಇದೆ. ಅದನ್ನು ಬಗೆಹರಿಸುವುದಕ್ಕೆ Metropolitan Authority Bill

ತನ್ನಿ, ಪಾಸ್ ಮಾಡಿ. ಈಗ ವಾಟಾಳ್ ನಾಗರಾಜ್‌ರವರೇನು ಕೇಳುತ್ತಿದ್ದಾರೆ, ಅದಕ್ಕೆ ಅದನ್ನು ತಂದರೆ ಆಗ ಅದು ಇತ್ಯರ್ಥವಾಗಬಹುದೆಂಬುದು ನನ್ನ ಅಭಿಪ್ರಾಯ.

ಶ್ರೀ ಆರ್.ರೋಷನ್ ಬೇಗ್ : ಮಾನ್ಯ ಮಂತ್ರಿಯವರು additional 500 MLD of water to the city by the end of 2011-2012 ಎಂದು ಹೇಳಿ Statement ಕೊಟ್ಟಿದ್ದಾರೆ. ಇನ್ನೂ 2020 ವರೆಗೂ ಇದೇ ತರಹ ಹೋದರೂ ಬೆಂಗಳೂರು ನಗರದಲ್ಲಿ the situation of water will be as on today, as of now ಯಾವ ತರಹವಿದೆ, ಅದೇ ತರಹವಿದೆ. ಮಾನ್ಯ ಅಧ್ಯಕ್ಷರೆ, ತಮ್ಮ ಮನೆಗಾಗಲಿ, ನಮ್ಮ ಮನೆಗಾಗಲಿ ಅಷ್ಟು ತೊಂದರೆಗಳಾಗುವುದಿಲ್ಲ. ಪ್ರಕಾಶ್‌ರವರೆ, ತಮ್ಮ ಮನೆಗಾಗಲಿ, ಮಂತ್ರಿಗಳ ಮನೆಗಾಗಲಿ ನೀರಿನ ತೊಂದರೆ ಅಷ್ಟು ಆಗುವುದಿಲ್ಲ. ಬೆಂಗಳೂರಿನ ಬಡಾವಣೆಗಳ ಕಡೆ ತಾವೊಂದು ಸಾರಿ ಹೋಗಿ ನೋಡಿ. ಅಲ್ಲಿ 4–4 ದಿವಸ ನೀರು ಬರುವುದಿಲ್ಲ. ನನ್ನ ಕ್ಷೇತ್ರವೆಂದಲ್ಲ. ಬೆಂಗಳೂರಿನಲ್ಲಿ ಹಲವಾರು ಕಡೆ ಬಹಳ Problem ಇದೆ. ಜಯನಗರದಲ್ಲಾಗಲಿ, ಯಾವುದೇ ಇರಲಿ. Greater Bangalore ಎಂದು ಹೇಳಿ ಹೊಸ C.M.Cs ಎಂದೇನು include ಮಾಡಿಕೊಂಡಿದ್ದೇವೆ, ಅಲ್ಲಿ ತಾವು ಕೇಳಬೇಡಿ. ಅಲ್ಲಿ ಒಂದೊಂದು ವಾರ ನೀರು ಬರುವುದಿಲ್ಲ.

ಅಧ್ಯಕ್ಷರು : ಆಯಿತು, ಪ್ರಶ್ನೆ ಕೇಳಿ. ಇದು ಪ್ರಶ್ನೋತ್ತರ.

ಶ್ರೀ ಆರ್. ರೋಷನ್ ಬೇಗ್ : I want a white paper on the affairs of the BWSSB in Bangalore ಎಂದು 10 ವರ್ಷಗಳಿಂದ ನಾವು ಕೇಳುತ್ತಿದ್ದೇವೆ. ಜಪಾನ್‌ನಿಂದ ಇಷ್ಟು ಕೋಟಿ ರೂಪಾಯಿ ಲೋನ್ ತೆಗೆದುಕೊಂಡಿದ್ದೇವೆ, ಇಷ್ಟು millions of Rupees ನಾವು ತೆಗೆದುಕೊಂಡಿದ್ದೇವೆಂದು ಹೇಳುತ್ತಾರೆ. ತೆಗೆದುಕೊಂಡಿದ್ದ ಆ ಹಣ ಏನಾಯಿತು? Underground.

ಶಾದಿಮಹಲ್ / ಸಮುದಾಯ ಭವನಗಳ ನಿರ್ಮಾಣ

247 (1573) ಶ್ರೀ ಧ್ರುವನಾರಾಯಣ ಆರ್. (ಸಂತೇಮರಳ್ಳಿ) : ಮಾನ್ಯ ಕಾರ್ಮಿಕ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?